ದಿಃ 17.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಮುಖ್ಯ ವಿಚಾರಣೆಃ ಶ್ರೀ ಡಿ.ಕೆ.ಪಿ., ವಕೀಲರಿಂದ ವಾದಿ ಪರವಾಗಿ</u>**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಮೂಡಿಗೆರೆ ಪಟ್ಟಣ ಪಂಚಾಯಿತಿಯಿಂದ ನೀಡಿರು ಇ.ಖಾತೆಯನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.2 ರಿಂದ ನಿ.ಪಿ.5 ಎಂದು ಗುರುತಿಸಲಾಯಿತು, ಮೂಲ ದಾವ ಸಂಖ್ಯೆ 19/2012 ರ ತೀರ್ಪಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೇಳಿದ್ದು, ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 14.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಎಸ್.ಡಿ. ವಕೀಲರಿಂದ ೧ನೇ ಪ್ರತಿವಾದಿ ಪರವಾಗಿ**

3. ಈ ದಾವೆಯನ್ನು ದಾಖಲು ಮಾಡುವ ಸಮಯದಲ್ಲಿ 1 ನೇ ವಾದಿಗೆ 10 ವರ್ಷ ದಾಟಿತ್ತು ಎಂದರೆ ಸರಿಯಲ್ಲ. 1 ನೇ ವಾದಿಗೆ ಈಗ 19 ವರ್ಷ ವಯಸ್ಸಾಗಿರುತ್ತದೆ. ದಿಃ 08.09.2021 ಕ್ಕೆ 1 ನೇ ವಾದಿಗೆ 18 ವರ್ಷ ವಯಸ್ಸಾಗಿತ್ತು ಎಂದರೆ ಸರಿ. 1 ನೇ ವಾದಿಯ ಪರವಾಗಿ ದಾವೆಯನ್ನು ನಡೆಸಲು ನಾನು ಯಾವುದೇ ಅಧಿಕಾರ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ದಾವ ಆಸ್ತಿಯಲ್ಲಿ ನಾನು ಯಾವುದೇ ಪಾಲನ್ನು ಕೇಳಿರುವುದಿಲ್ಲ. 1 ನೇ ವಾದಿಯು ವಯಸ್ಕರಾಗಿರುವುದರಿಂದ ನಾನು 1 ನೇ ವಾದಿಯ ಪರವಾಗಿ ದಾವೆಯನ್ನು ನಡೆಸಲು ಅರ್ಹಳಲ್ಲ ಎಂದರೆ ಸರಿಯಲ್ಲ. O.S.19/2012 ರಂತೆ ಇದೇ ನ್ಯಾಯಾಲಯದಲ್ಲಿ ನಾನು ದಾವೆ ಸಲ್ಲಿಸಿದ್ದೆನು ಎಂದರೆ ಸರಿ. O.S.19/2012 ರ ಆದೇಶದ ವಿರುದ್ಧ ಪ್ರತಿವಾದಿಗಳು ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದಲ್ಲಿಯು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಉಚ್ಚ ನ್ಯಾಯಾಲಯದಲ್ಲಿ O.S.19/2012 ರಲ್ಲಿ ಮಾಡಿರುವ ಆದೇಶದವು ಸರಿ ಇಲ್ಲ ಎಂದು ಪ್ರತಿವಾದಿಗಳು ಪ್ರಶ್ನಿಸಿರುತ್ತಾರೆ ಎಂದರೆ ಸರಿ. ಉಚ್ಚ ನ್ಯಾಯಾಲಯದಲ್ಲಿ ಸದರಿ ಮೇಲ್ಮನವಿಯಲ್ಲಿ ನಾನು ಹಾಜರಾಗಿರುತ್ತೇನೆ ಎಂದರೆ ಸರಿ. O.S.19/2012 ರ ಆದೇಶದ ಪ್ರಕಾರ FDP.3/2018 ರಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. 2018 ರಲ್ಲಿ ಈ ದಾವೆಯಲ್ಲಿ ಹೇಳಿರುವ ಆಸ್ತಿಗಳು ಇರುವ ಬಗ್ಗೆ ನನಗೆ ಗೊತ್ತಿರಲಿಲ್ಲ. 2019 ರಲ್ಲಿ ತಾಲ್ಲೂಕು ಕಚೇರಿಯಲ್ಲಿ ದಾಖಲೆಯನ್ನು ತೆಗೆಸಿದಾಗ ಈ ದಾವೆಯಲ್ಲಿ ಹೇಳಿರುವ ಆಸ್ತಿಗಳು ಇರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ. F.D.P.3/2018 ರಲ್ಲಿ ಈ ದಾವೆಯಲ್ಲಿ ಹೇಳಿರುವ ಆಸ್ತಿಯನ್ನು ಸೇರ್ಪಡೆ ಮಾಡಲು ನಾನು ಪ್ರಯತ್ನಪಟ್ಟಿರುವುದಿಲ್ಲ. ದಾವ

ಆಸ್ತಿಯು ಪ್ರತಿವಾದಿಗಳಿಗೆ ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ದಾವ ಐಟಂ ನಂಬರ್ 2 ಆಸ್ತಿಯು ಉಗ್ಗೇಹಳ್ಳಿ ಗ್ರಾಮದಲ್ಲಿ ಇರುತ್ತದೆ. ದಾವ ಐಟಂ ನಂಬರ್ 3 ಮತ್ತು 4 ಅಂಗಡಿ ಗ್ರಾಮದಲ್ಲಿ ಇರುತ್ತದೆ. ನಿ.ಪಿ.3 ಮತ್ತು 4 ಪಹಣಿ ಪತ್ರದಲ್ಲಿ ಬಿ.ಆರ್. ಸುನೀಲ್ ಕುಮಾರ್ ರವರ ಹೆಸರು ಇರುತ್ತದೆ ಎಂದರೆ ಸರಿ. ಸದರಿ ಸುನೀಲ್ ಕುಮಾರ್ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 1ನೇ ಪ್ರತಿವಾದಿ ಮತ್ತು ಬಿ.ಆರ್. ಸುನೀಲ್ ಕುಮಾರ್ ರವರು ಸದರಿ ಆಸ್ತಿಯನ್ನು ಬೇರೆಯವರಿಂದ ಖರೀದಿ ಮಾಡಿರುತ್ತಾರೆ.

4. ನನಗೆ ವಿವಾಹವಾದ ಸಮಯದಲ್ಲಿ ಪ್ರತಿವಾದಿಗಳಿಗೆ ಎಲ್ಲೆಲ್ಲಿ ಜಮೀನು ಇತ್ತು ಎನ್ನುವ ಬಗ್ಗೆ ನನಗೆ ಗೊತ್ತಿತ್ತು. ದಾವ ಐಟಂ ನಂಬರ್ 2 ರಲ್ಲಿ ನಾನು ಮದುವೆಯಾಗುವ ಸಮಯದಲ್ಲಿ ಎಷ್ಟು ಕಾಫಿಯನ್ನು ಬೆಳೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ದಾವ ಐಟಂ ನಂಬರ್ 2 ರಲ್ಲಿ ನಾನು ಮದುವೆಯಾಗುವ ಸಮಯದ್ಲಿ ಕಾಫಿ ಗಿಡಗಳು ಇದ್ದವು. ನಾನು ಸದರಿ ಕಾಫಿ ಗಿಡಗಳ ಕೆಲಸ ಮಾಡಿಸಲು ಹೋಗುತ್ತಿದ್ದೆನು. ನನ್ನ ಮದುವೆಯು 2001 ರಲ್ಲಿ ಆಗಿರುತ್ತದೆ. ಪ್ರತಿವಾದಿಗಳ ಮನೆಯ ಪಕ್ಕದಲ್ಲಿಯೇ ದಾವ ಆಸ್ತಿಗಳು ಇರುತ್ತದೆ. ಮೂಲ ದಾವ ಸಂಖ್ಯೆ 19/2012 ದಾವೆಯಲ್ಲಿ ಮನೆಯು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದು ಹೇಳಿರುತ್ತೇನೆ ಎಂದು ನನಗೆ ನೆನಪಿಲ್ಲ. ದಾವ ಸಂಖ್ಯೆ 19/12 ರಲ್ಲಿ ಮನೆಯನ್ನು ಭಾಗ ಮಾಡುವಂತೆ ನಾನು ಕೇಳಿರುತ್ತೇನೆ. ಸದರಿ ಮನೆಯು ಸರ್ವೆ ನಂಬರ್ 193/2 ಆಸ್ತಿಯ ಎಷ್ಟು ದೂರದಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವ ಸಂಖ್ಯೆ 19/12 ರಲ್ಲಿ ಸದರಿ ಮನೆಯು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಮತ್ತು ಎಷ್ಟು ವಿಸ್ತೀರ್ಣ ನಮೂದು ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವ ಐಟಂ ನಂಬರ್ 3 ಮತ್ತು 4

ಆಸ್ತಿಯು ನಮ್ಮ ಮನೆಯಿಂದ ಎಷ್ಟು ದೂರದಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವ ಐಟಂ ನಂಬರ್ 3 ಮತ್ತು 4 ನ್ನು ನಾನು ಮದುವೆ ಆಗುವ ಸಮಯದಲ್ಲಿ 1 ನೇ ಪ್ರತಿವಾದಿಯೇ ಕೃಷಿ ಮಾಡುತ್ತಿದ್ದರು. ದಾವ ಐಟಂ ನಂಬರ್ 3 ಮತ್ತು 4 ಆಸ್ತಿಗೆ ನಾನು ಹೋಗಿರುತ್ತೇನೆ. ಮದುವೆ ಆಗುವ ಸಮಯದಲ್ಲಿ ಸುನೀಲ್ ಕುಮಾರ್ ಮತ್ತು ಸುದೀರ್ ಕುಮಾರ್ ರವರ ಹೆಸರಿನಲ್ಲಿ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿತ್ತು. ಸುನೀಲ್ ಕುಮಾರ್ ನನ್ನ ಭಾವನಾಗಿರುತ್ತಾರೆ.

5. ನಿ.ಪಿ.1 ದಾಖಲೆಯಲ್ಲಿ ನಮೂದು ಮಾಡಿರುವ ಆಸ್ತಿಯು ಪ್ರತಿವಾದಿಗಳಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. Peerless Insurance ಬಗ್ಗೆ ನನಗೆ ಗೊತ್ತಿರುತ್ತದೆ. 1 ನೇ ಪ್ರತಿವಾದಿಯು Peerless Insurance ಕಂಪನಿಯಲ್ಲಿ Agent ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವ ಐಟಂ ನಂಬರ್ 1 ರಿಂದ 4 ಆಸ್ತಿಗಳು ಯಾರಿಂದ ಹೇಗೆ ಯಾರಿಂದ ಬಂದಿರುತ್ತದೆ ಎಂದು ನಾನು ದಾವೆಯಲ್ಲಿ ಹೇಳಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. O.S.19/2012 ರಂತೆ ಈ ಮೊದಲೇ ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುವುದರಿಂದ ಪುನಃ ಈ ದಾವೆಯಲ್ಲಿ ವಿಭಾಗ ಕೋರಲು ವಾದಿಗಳು ಅರ್ಹರಲ್ಲ ಎಂದರೆ ಸರಿಯಲ್ಲ. ಉಚ್ಚ ನ್ಯಾಯಾಲಯದಿಂದ ನನಗೆ ಮೇಲ್ಮನವಿಯ ಬಗ್ಗೆ ಯಾವುದೇ ನೋಟೀಸು ಬಂದಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 05.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಎಸ್.ಡಿ. ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ**

6. ನನ್ನ 2 ನೇ ಮಗನಿಗೆ ಈಗ 18 ವರ್ಷ ವಯಸ್ಸಾಗಿರುತ್ತದೆ ಎಂದರೆ ಸರಿ. ನನ್ನ ಮಗನಿಗೆ 18 ವರ್ಷ ವಯಸ್ಸಾದ ಬಗ್ಗೆ ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ. O.S.19/2012 ರ ಬಾಬ್ತು ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯು ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ಸದರಿ ಮೇಲ್ಮನವಿಯು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ನನ್ನ ಗಮನಕ್ಕೆ ಯಾವಾಗ ಬಂದಿರುತ್ತದೆ ಎಂದು ನೆನಪಿಲ್ಲ. ಸದರಿ R.S.A. ಯಲ್ಲಿ ನಾನು O.S.19/2012 ರ ವಾದ ಪತ್ರವನ್ನು ತಿದ್ದುಪಡಿ ಮಾಡುವಂತೆ ಅರ್ಜಿಯನ್ನು ಒಂದು ವರ್ಷಗಳ ಹಿಂದೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ನಮೂದು ಮಾಡಿರುವ ಆಸ್ತಿಗಳನ್ನು ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣದಲ್ಲಿ ಸದರಿ ಆಸ್ತಿಗಳನ್ನು ಸೇರಿಸುವಂತೆ ನಾನು ಕೇಳಿಕೊಂಡಿರುವುದಿಲ್ಲ. ಈ ದಾವೆಯು ವಿಚಾರಣೆಗೆ ಬಾಕಿ ಇರುವ ಬಗ್ಗೆ ನಾನು ಉಚ್ಚ ನ್ಯಾಯಾಲಯಲ್ಲಿ ಬಾಕಿ ಇರುವ ಪ್ರಕರಣದಲ್ಲಿ ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ. ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸುವ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ದಾವ ಐಟಂ ನಂಬರ್ 2 ರಿಂದ 4 ಆಸ್ತಿಗಳ ಚಕ್ಕುಬಂದಿಯನ್ನು ದಾವೆಯಲ್ಲಿ ನಮೂದು ಮಾಡಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವ ಐಟಂ ನಂಬರ್ 1 ಮತ್ತು 2 ಆಸ್ತಿಗಳನ್ನು 1 ನೇ ಪ್ರತಿವಾದಿಯು ಖರೀದಿ ಮಾಡಿರುವ ಆಸ್ತಿಗಳು ಎಂದರೆ ಸರಿಯಲ್ಲ. ದಾವ ಐಟಂ ನಂಬರ್ 3 ಮತ್ತು 4 ಆಸ್ತಿಗಳು 1 ನೇ ಪ್ರತಿವಾದಿ ಮತ್ತು ಸುನೀಲ್ ಕುಮಾರ್ ರವರ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ದಾವ ಆಸ್ತಿಗಳು 1 ನೇ

ಪ್ರತಿವಾದಿ ಮತ್ತು ಸುನೀಲ್ ಕುಮಾರ್ ರವರ ಸ್ವಂತ ಆಸ್ತಿಗಳು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿಯ ಉತ್ಪಾದನೆಯಿಂದ ಖರೀದಿ ಮಾಡಿರುವ ಆಸ್ತಿಗಳು ಎಂದು ನುಡಿಯುತ್ತಾರೆ. ದಾವ ಐಟಂ ನಂಬರ್ 1 ರ ವಿಸ್ತೀರ್ಣ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆಯು ಹಾನಬಾಳು ಹೋಬಳಿ, ಸಕಲೇಶಪುರ ತಾಲ್ಲೂಕಿನ ಬಿಳಿಸಾರೆ ಗ್ರಾಮದಲ್ಲಿ ವಾಸವಾಗಿರುತ್ತಾರೆ. 1 ನೇ ಪ್ರತಿವಾದಿಯ ತಂದೆಯು ಬಿಳಿಸಾರೆ ಗ್ರಾಮದ ಆಸ್ತಿಗಳನ್ನು ಮಾರಾಟ ಮಾಡಿ ಅತ್ತಿಗೆರೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಅತ್ತಿಗೆರೆ ಗ್ರಾಮದಲ್ಲಿ 1 ನೇ ಪ್ರತಿವಾದಿಯ ತಂದೆಗೆ ಆಸ್ತಿ ಇರುತ್ತದೆ. 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇರುವ ಅತ್ತಿಗೆರೆ ಸ್ವತ್ತುಗಳು ಈಗಲು ರಾಮೇಗೌಡರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಆಸ್ತಿಗಳು ವಿಭಾಗ ಆಗಿ ಸುನೀಲ್ ಕುಮಾರ್ ರವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸುನೀಲ್ ಕುಮಾರ್ ರವರ ಹೆಸರಿಗೆ ಅತ್ತಿಗೆರೆಯ ಆಸ್ತಿಗೆ ಯಾವಾಗ ವಿಭಾಗ ಪತ್ರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಅತ್ತಿಗೆರೆ ಗ್ರಾಮದಲ್ಲಿ ಇರುವ ಆಸ್ತಿಯಲ್ಲಿ ಯಾವುದೇ ಭಾಗ ನೀಡಿರುವುದಿಲ್ಲ. ಅತ್ತಿಗೆರೆ ಗ್ರಾಮದಲ್ಲಿ ಇರುವ 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದ್ದ ಆಸ್ತಿಯಲ್ಲಿ ವಾದಿಗಳು ಭಾಗ ಕೇಳಿರುವುದಿಲ್ಲ. ಅತ್ತಿಗೆರೆ ಆಸ್ತಿಯ ದಾಖಲಾತಿಗಳನ್ನು ನಾನು ಪಡೆದುಕೊಂಡಿರುತ್ತೇನೆ. ರಾಮೇಗೌಡರ ಹೆಸರಿನಲ್ಲಿ ಇದ್ದ ಅತ್ತಿಗೆರೆಯ ಆಸ್ತಿಯ ಆದಾಯದಿಂದ ದಾವ ಆಸ್ತಿಗಳನ್ನು ಖರೀದಿ ಮಾಡಿರುವ ಬಗ್ಗೆ ನಾನು ವಾದ ಪತ್ರದಲ್ಲಿ ಹೇಳಿರುತ್ತೇನೆ.

7. 1 ನೇ ಪ್ರತಿವಾದಿಯ ತಂದೆ ರಾಮೇಗೌಡರು ನನ್ನ ಮದುವೆಯ ಪೂರ್ವದಲ್ಲಿಯೇ ಮೃತಪಟ್ಟಿರುತ್ತಾರೆ. ಅತ್ತಿಗೆರೆ ಗ್ರಾಮದ ಆಸ್ತಿಗಳು ವಿಭಾಗ ಆಗಿರುವುದರಿಂದ ನಾನು ಈ ದಾವೆಯಲ್ಲಿ ಸದರಿ ಆಸ್ತಿಗಳನ್ನು ಸೇರಿಸಿರುವುದಿಲ್ಲ. 1 ನೇ ಪ್ರತಿವಾದಿಗೆ ಅತ್ತಿಗೆರೆ ಆಸ್ತಿಯಲ್ಲಿ ಎಷ್ಟು ಎಕರೆ ಆಸ್ತಿ

ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಆಗಿರುತ್ತಿದ್ದರೆ ಈ ಹಿಂದೆ ಸಲ್ಲಿಸಿರುವ O.S.19/2012 ರ ಪ್ರಕರಣದಲ್ಲಿ ಸದರಿ ಆಸ್ತಿಗಳನ್ನು ಸೇರಿಸುತ್ತಿದ್ದಿರಿ ಎಂದರೆ ಸಾಕ್ಷಿಯು ಸದರಿ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಈ ದಾವ ಆಸ್ತಿಗಳ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ